**ಓ.ಎಸ್‌ಃ 46/2015** **ಡಿ ಡಬ್ಲೂ–1 ಧರ್ಮರಾಜು**

ದಿನಾಂಕಃ 16.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ**

ನಾನು M.Sc, PhD ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಚಾಮರಾಜನಗರ ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು B.Sc ಪದವಿ ಯಿಂದ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಉತ್ತರಕಾಂಡ ರಾಜ್ಯದಲ್ಲಿ 34 ವರ್ಷ ಮತ್ತು ಮೈಸೂರಿನಲ್ಲಿ ಉಳಿದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಿವೃತ್ತಿ ಆದ ನಂತರ ನಾನು ಮೈಸೂರಿನಲ್ಲಿ ವಾಸವಾಗಿದ್ದೇನೆ. ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಿಪಿ 1 ರಲ್ಲಿ ಬಲಗೈ ಕುಂಟಮಾದ ಎಂದು ನಮೂದಾಗಿದೆ ಎಂದರೆ ಸರಿ. ಸರ್ವೇ ನಂಬರ್ 100 ರ ಟಿಪ್ಪಣಿ ಕಾಪಿಯನ್ನು ನಾನು ನೋಡಿಲ್ಲ. ನಿಪಿ 2 ರಲ್ಲಿ ಸರ್ವೇ ನಂಬರ್ 100 ರ ಖಾತೆಯನ್ನು ದಿಃ 09.12.1927 ರಂದು ಕುಂಟಮಾದನ ಮಗ ಕಾಚಕ್ಕಿಮಾದನಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ನಿಪಿ 26 ರಲ್ಲಿ ಸರ್ವೇ ನಂಬರ್ 100 ರ ಖಾತೆಯು ಕಾಚಕ್ಕಿಮಾದ ಬಿನ್ ಕುಂಟಮಾದರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ದಾಖಲೆ ಸರಿಯಾಗಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 26 ರ ದಾಖಲೆಯ ಜೆರಾಕ್ಸ್ ಪ್ರತಿಯನ್ನು ತೋರಿಸಿ ಅದರಲ್ಲಿ ಸರ್ವೇ ನಂಬರ್ 100 ರ ಖಾತೆಯು ಕಾಚಕ್ಕಿಮಾದ ಬಿನ್ ಕುಂಟಮಾದರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ.

ಕುಳ್ಳ ಬಿನ್ ದೊಡ್ಡಹೈದ ನನ್ನ ಮುತ್ತಾತ. ನಿಪಿ 26 ರ ಕಾಲಂ ನಂಬರ್ 9 ರಲ್ಲಿ ಕುಳ್ಳ ಬಿನ್ ದೊಡ್ಡಹೈದರವರ ಹೆಸರು ನಮೂದಾಗಿದೆ ಎಂದರೆ ಸರಿ. ಕುಳ್ಳನ ಮಗ ವರದ ನನ್ನ ತಾತ. ನಿಪಿ 33 ರಲ್ಲಿ ಕುಳ್ಳನ ಮಗ ವರದರವರ ಹೆಸರು ನಮೂದಾಗಿದೆ

ಎಂದರೆ ಸರಿ. ಸರ್ವೇ ನಂಬರ್ 79 ರ ಜಮೀನು ನನ್ನ ತಂದೆಗೆ ಸೇರಿದ್ದು. ನಿಪಿ 33 ರ ಕ್ರಯ ಪತ್ರದ ಷೆಡ್ಯೂಲ್ ನಲ್ಲಿ ಪೂರ್ವಕ್ಕೆ ನಂಜನ ಜಮೀನು ಅಲ್ಲ ಕಾಚಕ್ಕಿಮಾದನ ಜಮೀನು ಎಂದು ನಮೂದಿಸಿರುತ್ತಾರೆ ಎಂದರೆ ಸರಿ.

1 ರಿಂದ 7 ನೇ ವಾದಿಯರು ನಂಜಯ್ಯನ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 79 ರ ಜಮೀನು ಸರ್ವೇ ನಂಬರ್ 100 ಜಮೀನಿನ ಪಶ್ಚಿಮಕ್ಕೆ ಇರುತ್ತದೆ. ಸರ್ವೇ ನಂಬರ್ 79 ರ ಜಮೀನಿನ ಆಜುಬಾಜುದಾರರು ನನಗೆ ಗೊತ್ತು. ರುದ್ರಯ್ಯರವರಿಗೆ ಜಮೀನನ್ನು ಮಾರಾಟ ಮಾಡಿರುವವರು ಕಾಚಕ್ಕಿಮಾದಯ್ಯನ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ನಿಡಿ 1 ರ ದಾನಪತ್ರದಲ್ಲಿ ಐಟಮ್ ನಂಬರ್ 2 ಆಸ್ತಿಯ ದಕ್ಷಿಣಕ್ಕೆ ನಮೂದಿಸಿರುವ ರುದ್ರಯ್ಯನವರಿಗೆ ಜಮೀನನ್ನು 2 ರಿಂದ 7 ನೇ ವಾದಿಗಳ ತಂದೆ ನಂಜಯ್ಯ ಮತ್ತು ಅವರ ಸಹೋದರರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 14 ರಲ್ಲಿ ಸರ್ವೇ ನಂಬರ್ 100/1ಬಿ ರಲ್ಲಿ ಒಂದು ಎಕರೆ 5 ಗುಂಟೆ ಜಮೀನು ನನ್ನ ತಾತ ಕುಳ್ಳನ ಮಗ ವರದನಿಗೆ ಹೇಗೆ ಬಂತು ಎಂದು ನಮೂದಾಗಿಲ್ಲ ಎಂದರೆ ಸರಿ. ಕಾಚಕ್ಕಿಮಾದಯ್ಯನಿಂದ ನನ್ನ ತಾತ ವರದಯ್ಯನಿಗೆ ಸರ್ವೇ ನಂಬರ್ 100/1ಬಿ ರ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾತ ವರದಯ್ಯನಿಗೆ ಬಂದ ಬಗ್ಗೆ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಡಿ 1 ರ ದಾನಪತ್ರವು ಈ ಪ್ರಕರಣ ಚಾಲ್ತಿಯಲ್ಲಿದ್ದ ಸಮಯದಲ್ಲಿ ಮಾಡಲಾಗಿದೆ ಎಂದರೆ ಸರಿ. ನನ್ನ ಪ್ರಕಾರ ನಿಡಿ 1 ರ ದಾನ ಪತ್ರದಲ್ಲಿ ನಮೂದಿಸಿರುವ ಜಮೀನಿಗೆ ನಮಿತಾ ಎಂ ಸಿ ರವರೇ ಮಾಲೀಕರು. ನಿಡಿ 1 ರ ದಾನ ಪತ್ರದಲ್ಲಿ ನಮೂದಿಸಿರುವ ಜಮೀನಿನ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ 1 ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ನೋಂದಾಯಿತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸರ್ವೇ ನಂಬರ್ 100/1ಬಿ ರ ಜಮೀನು ಕುಂಟಮಾದರವರಿಗೆ ಸರ್ಕಾರದಿಂದ ಮಂಜೂರು ಮಾಡಿದ್ದು ಸದರಿಯವರು

ಮೃತಪಟ್ಟ ನಂತರ ವಾದಿಯರೇ ಸದರಿ ಜಮೀನಿಗೆ ಮಾಲೀಕರು ಎಂದರೆ ಸರಿಯಲ್ಲ. ವಾದಿಯರು ಕಾಚಕ್ಕಿಮಾದಯ್ಯನ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಕಾಚಕ್ಕಿಮಾದಯ್ಯನ ವಾರಸುದಾರರೇ ಅಥವಾ ಇಲ್ಲವೇ ಎಂದು ನಾನು ವಿಚಾರ ಮಾಡಿಲ್ಲ. ನಿಡಿ 14 ರ ಪಹಣಿ ಪತ್ರಿಕೆಯಲ್ಲಿ ನನ್ನ ತಾತ ಕುಳ್ಳನ ಮಗ ವರದಯ್ಯರವರ ಹೆಸರು 1966-67 ರಲ್ಲಿ ನಮೂದಾಗಿದೆ ಎಂದರೆ ಸರಿ. 1966-67 ಕ್ಕಿಂತ ಹಿಂದಿನ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುವ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಸರ್ವೇ ನಂಬರ್ 100/1ಬಿ ರ ಜಮೀನನ್ನು ಕಬಳಿಸುವ ಸಲುವಾಗಿ ನಿಡಿ 1 ರಿಂದ 14 ರ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ 4 ಮತ್ತು ನಿಡಿ 12 ರ ಋಣಭಾರ ಪ್ರಮಾಣ ಪತ್ರಗಳಲ್ಲಿ ನನ್ನ ತಂದೆ, ತಾಯಿ ಮತ್ತು ನನ್ನ ತಾತನಿಗೆ ಜಮೀನುಗಳು ಬಂದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾತನ ಮಾಲೀಕತ್ವಕ್ಕೆ ಸೇರಿದ್ದು ಎಂಬುದರ ಬಗ್ಗೆ ನೋಂದಾಯಿತ ದಾಖಲೆ ಇಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

ನನ್ನ ತಂದೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾತನಿಗೆ ಹೇಗೆ ಬಂತು ಎಂಬುದನ್ನು ನಮೂದಿಸಿಲ್ಲ ಎಂದರೆ ಸರಿ. ನಿಡಿ 1 ರಲ್ಲಿ ನನ್ನ ತಾತನಿಗೆ ಸರ್ವೇ ನಂಬರ್ 100/1ಬಿ ರ ಜಮೀನು ಹೇಗೆ ಬಂತು ಎಂಬುದನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಎಂ ಆರ್ ಮೂಲಕ ಬಂದಿದೆ ಎಂದು ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ 1 ರ ದಾಖಲೆಯಲ್ಲಿ ನಮೂದಿಸಿರುವ ಎಂ ಆರ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಎಂ ಆರ್ ದಾಖಲೆಗಳಲ್ಲಿ ಕ್ರಯ

ಪತ್ರದ ಮೂಲಕ ಸರ್ವೇ ನಂಬರ್ 100/1ಬಿ ರ ಜಮೀನು ನನ್ನ ತಾತನಿಗೆ ಬಂದಿದೆ ಎಂದು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.